ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/06/ಇಸಿಎಸ್(1)/2023

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ: 29.11.2023

**ಜ್ಞಾಪನ**

ವಿಷಯ: 2023-24ನೇ ಸಾಲಿನ ಡಿಸೆಂಬರ್ 2023 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗೆ ಸಂಬಂಧಿಸಿದಂತೆ ಆಂತರಿಕ ಅಂಕಗಳನ್ನು ಪರಿಶೀಲಿಸುವ ಪರಿವೀಕ್ಷಕರು ಕಾರ್ಯ ನಿರ್ವಹಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಜ್ಞಾಪನ ಸಂಖ್ಯೆ:ಬಿಟಿಇ/06/ಇಸಿಎಸ್(1)/2023 ದಿ:03.11.2023

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2023-24ನೇ ಸಾಲಿನ ಡಿಸೆಂಬರ್ 2023 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗೆ ಸಂಬಂಧಿಸಿದಂತೆ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಆಂತರಿಕ ಅಂಕಗಳನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲು "ಆಂತರಿಕ ಅಂಕಗಳ ಪರಿವೀಕ್ಷಕರು" ಗಳ ನೇಮಕಾತಿ ಮಾಹಿತಿ BTELinx ವೆಬ್ ಪೋರ್ಟಲ್‌ನಲ್ಲಿ (ಸರ್ಕಾರಿ ಸಂಸ್ಥೆಗಳಗೂ ಸಹಿತ) ಪ್ರಸ್ತುತ ಲಭ್ಯವಿರುತ್ತದೆ.

ಆಂತರಿಕ ಅಂಕಗಳ ಪರಿವೀಕ್ಷಕರು ಮತ್ತು ಸಂಬಂಧಪಟ್ಟ ಸಂಸ್ಥೆಗಳ ಪ್ರಾಚಾರ್ಯರುಗಳು ಉಲ್ಲೇಖಿತ ಜ್ಞಾಪನದನ್ವಯ ತತ್‌ಕ್ಷಣ ಕಾರ್ಯ ಪ್ರವೃತ್ತರಾಗಿ_ತೃಪ್ತಿಕರ ಹಾಜರಾತಿ ಹೊಂದಿರುವ ಎಲ್ಲಾ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಚೆಕ್‌ಲಿಸ್ಟ್ ನಲ್ಲಿನ ಅಂಶಗಳ ಪ್ರಕಾರ (ಪರೀಕ್ಷಾ ಶುಲ್ಕ ಪಾವತಿ, ಬ್ರಿಡ್ಜ್ ಕೋರ್ಸ್‌ಗಳು, CIE ಅಂಕಗಳು, C-20 ರೆಗ್ಯುಲೇಷನ್ ನಲ್ಲಿನ ಇನ್ನಿತರೆ ಅಂಶಗಳನ್ನೊಳಗೊಂಡಂತೆ) ಪರಿಶೀಲಿಸಿ ದಿನಾಂಕ:06.12.2023 ರೊಳಗೆ ಅಪ್‌ಲೋಡ್ ಮಾಡಲು ಮತ್ತು ಚೆಕ್ ಲಿಸ್ಟ್ ಪ್ರತಿಯೊಂದಿಗೆ ಕೆಳಕಂಡ ಪಟ್ಟಿಗಳ ಪ್ರತಿಗಳನ್ನು ಮಂಡಳಿಗೆ ರವಾನಿಸಲು ಸೂಚಿಸಲಾಗಿದೆ.

1. Not Eligible ( <40% CIE) ವಿದ್ಯಾರ್ಥಿಗಳ ಪಟ್ಟಿ – ಪ್ರೋಗ್ರಾಮ್‌ವಾರು & ಸೆಮಿಸ್ಟರ್‌ವಾರು
2. Exam Fee Not Paid ವಿದ್ಯಾರ್ಥಿಗಳ ಪಟ್ಟಿ – ಪ್ರೋಗ್ರಾಮ್‌ವಾರು & ಸೆಮಿಸ್ಟರ್‌ವಾರು
3. ಲ್ಯಾಟರಲ್ ಎಂಟ್ರಿ ಬ್ರಿಡ್ಜ್ ವಿಷಯಗಳಲ್ಲಿ Exam Fee Not Paid ವಿದ್ಯಾರ್ಥಿಗಳ ಪಟ್ಟಿ – ಪ್ರೋಗ್ರಾಮ್‌ವಾರು & ಸೆಮಿಸ್ಟರ್‌ವಾರು
4. ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳ ಪಟ್ಟಿ – ಪ್ರೋಗ್ರಾಮ್‌ವಾರು & ಸೆಮಿಸ್ಟರ್‌ವಾರು

ಮೇಲ್ಕಂಡ ಪಟ್ಟಿಗಳನ್ನು ಆಂತರಿಕ ಅಂಕಗಳ ವಹಿಯಲ್ಲಿ ನಮೂದಿಸಿ ನಂತರ ಉಲ್ಲೇಖಿತ ಜ್ಞಾಪನದನ್ವಯ ಸಂಬಂಧಪಟ್ಟ ವಿಭಾಗಾಧಿಕಾರಿಗಳು, ಪ್ರಾಂಶುಪಾಲರು ಮತ್ತು ಪರಿವೀಕ್ಷಕರ ಪೂರ್ಣ ವಿಳಾಸ & Staff Id ಯೊಂದಿಗೆ ಉಲ್ಲೇಖಿತ ಜ್ಞಾಪನದಲ್ಲಿರುವಂತೆ ದೃಢೀಕರಿಸಲು ತಿಳಿಸಲಾಗಿದೆ. ತಪ್ಪಿದಲ್ಲಿ ಸರ್ಕಾರಿ ಆದೇಶದ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

**<u>ವಿಶೇಷ ಸೂಚನೆ:</u> ಆಂತರಿಕ ಅಂಕಗಳನ್ನು ತಪ್ಪಾಗಿ ಅಪ್‌ಲೋಡ್ ಮಾಡಿದಲ್ಲಿ ನಂತರದಲ್ಲಿ ಯಾವುದೇ ರೀತಿಯ ತಿದ್ದುಪಡಿ/ ಮತ್ತೊಮ್ಮೆ ಅಪ್‌ಲೋಡ್ ಮಾಡಲು ಅವಕಾಶವಿರುವುದಿಲ್ಲ.**

ಕಾರ್ಯದರ್ಶಿ

ಇವರಿಗೆ,

1..ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪ್ರಾಂಶುಪಾಲರುಗಳಿಗೆ.-ಅಗತ್ಯ ಕ್ರಮಕ್ಕಾಗಿ
2.ಆಂತರಿಕ ಅಂಕಗಳ ಪರಿವೀಕ್ಷಕರುಗಳಿಗೆ- ಸಂಬಂಧಪಟ್ಟ ಪ್ರಿನ್ಸಿಪಾಲರುಗಳ ಮುಖಾಂತರ

ಪ್ರತಿ:

1. ಕಂಪ್ಯೂಟರ್ ವಿಭಾಗ – ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
2. ಇ-ಗವರ್ನೆನ್ಸ್ ವಿಭಾಗ –ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಕಾರ್ಯದರ್ಶಿಯವರ ಆಪ್ತಶಾಖೆ
4. ಪರೀಕ್ಷಾ ವಿಭಾಗದ ಅಧಿಕಾರಿಗಳು/ ಸಿಬ್ಬಂದಿಯವರಿಗೆ
5. ಇಎಪಿ ವಿಭಾಗ